# ದಿ ಶಿರಸಿ ಅರ್ಬನ್ ಸಹಕಾರಿ ಬ್ಯಾಂಕ್ ಲಿ., ಶಿರಸಿ

ಕೇಂದ್ರ ಕಛೇರಿ, ರಾಯರಪೇಟೆ, ಶಿರಸಿ(ಉ.ಕ)

ರಿಟರ್ನಿಂಗ್ ಅಧಿಕಾರಿಗಳು, ದಿ ಶಿರಸಿ ಅರ್ಬನ್ ಸಹಕಾರಿ ಬ್ಯಾಂಕ್ ಲಿ., ಶಿರಸಿ ಇವರ ಕಛೇರಿಯಿಂದ

## ಚುನಾವಣಾ ನೋಟೀಸು

1960 ನಿಯಮ ನಂ14(3) ರನ್ವಯ

ದಿ ಶಿರಸಿ ಅರ್ಬನ್ ಸಹಕಾರಿ ಬ್ಯಾಂಕ್ ಲಿ., ಶಿರಸಿ ಇದರ ಆಡಳಿತ ಮಂಡಲಿಗೆ ಚುನಾವಣಾ ದಿನಾಂಕದಿಂದ ಮುಂದಿನ 5 ವರ್ಷಗಳ ಅವಧಿಗೆ, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು-27 ರವರ ಆದೇಶ ಸಂಖ್ಯೆ: ಸಚುಪ್ರಾ/ಬೆ/ಉ.ಕ.ಜಿ/ಜಂ.ನಿ/46/2023-24 ದಿನಾಂಕ 18-11-2023 ರನ್ವಯ ಮಂಜುನಾಥ ಸಿಂಗ್, ಸಹಕಾರ ಸಂಘಗಳ ಉಪನಿಬಂಧಕರು, ಉತ್ತರ ಕನ್ನಡ ಜಿಲ್ಲೆ, ಕಾರವಾರ ಆದ ನನ್ನನ್ನು ರಿಟರ್ನಿಂಗ್ ಅಧಿಕಾರಿ ಎಂದು ನೇಮಕಾತಿಗೊಳಿಸಿ ಆದೇಶಿಸಿದ್ದು, ಸದರಿ ಆದೇಶದನ್ವಯ ಈ ಸಹಕಾರಿಯ ಉಪನಿಯಮ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಮತ್ತು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರನ್ವಯ **ದಿನಾಂಕ 14-01-2024 ಭಾನುವಾರದಂದು** ಬೆಳಿಗ್ಗೆ 9.00 ಘಂಟೆಯಿಂದ ಮಧ್ಯಾಹ್ನ 4.00 ಘಂಟೆಯವರೆಗೆ **ಎಂ.ಇ.ಎಸ್. ಕಾಲೇಜ್ ಆಫ್ ಕಾಮರ್ಸ್, ಶಿರಸಿಯಲ್ಲಿ** ನಡೆಯುವ ಆಡಳಿತ ಮಂಡಲಿಯ ನಿರ್ದೇಶಕರುಗಳ ಚುನಾವಣೆಯಲ್ಲಿ ಆಯ್ಕೆಮಾಡಬೇಕಾದ ಸ್ಥಾನಗಳ ವಿವರ ಹಾಗೂ ಚುನಾವಣಾ ವೇಳಾಪಟ್ಟಿಯನ್ನು ಈ ಕೆಳಕಂಡಂತೆ ಇರತಕ್ಕದೆಂದು ನೋಟೀಸು ನೀಡಲಾಗಿದೆ.

| | | | |
|---|---|---|---|
| 1) | ಸಾಮಾನ್ಯ ಮತದಾರ ಕ್ಷೇತ್ರದಿಂದ | – | 13 ಸ್ಥಾನಗಳು |
| 2) | ಮಹಿಳಾ ಸದಸ್ಯರ ಕಾಯ್ದಿಟ್ಟ ಸ್ಥಾನದಿಂದ | – | 02 ಸ್ಥಾನಗಳು |
| 3) | ಪರಿಶಿಷ್ಟ ಜಾತಿಯ ಸದಸ್ಯರ ಕಾಯ್ದಿಟ್ಟ ಸ್ಥಾನದಿಂದ | – | 01 ಸ್ಥಾನ |
| 4) | ಪರಿಶಿಷ್ಟ ವರ್ಗದ ಸದಸ್ಯರ ಕಾಯ್ದಿಟ್ಟ ಸ್ಥಾನದಿಂದ | – | 01 ಸ್ಥಾನ |
| 5) | ಹಿಂದುಳಿದ ವರ್ಗದ ಸದಸ್ಯರ ಕಾಯ್ದಿಟ್ಟ ಸ್ಥಾನದಿಂದ | | |
| | ಎ) 'ಅ' ವರ್ಗದ ಮೀಸಲು ಸ್ಥಾನ | – | 01 ಸ್ಥಾನ |
| | ಬ) 'ಬ' ವರ್ಗದ ಮೀಸಲು ಸ್ಥಾನ | – | 01 ಸ್ಥಾನ |
| | ಒಟ್ಟು | – | **19 ಸ್ಥಾನಗಳು** |

ಬ್ಯಾಂಕಿನ ಪೋಟ ನಿಯಮ 43.1 ರ ಪ್ರಕಾರ ನಿರ್ದೇಶಕ ಮಂಡಲಿಗೆ ಈ ಕೆಳಗಿನಂತೆ ಪ್ರತಿನಿಧಿಗಳನ್ನು ಚುನಾಯಿಸಬೇಕಿದೆ.

| ಅ.ನಂ | ಸದಸ್ಯ ಮತದಾರರ ಕ್ಷೇತ್ರದ ವಿವರ | ಚುನಾಯಿಸತಕ್ಕ ಪ್ರತಿನಿಧಿಗಳ ಸಂಖ್ಯೆ |
|---|---|---|
| 1 | ಶಿರಸಿ ಪ್ರಧಾನ, ಚನ್ನಪಟ್ಟಣ ಬಝಾರ, ಶಿರಸಿ ಉಪನಗರ ಹಾಗೂ ಬನವಾಸಿ ಶಾಖಾ ಮತದಾರ ಕ್ಷೇತ್ರದ ಸದಸ್ಯ ಮತದಾರರು ತಮ್ಮ ತಮ್ಮೊಳಗಿನಿಂದ ಚುನಾಯಿಸಬೇಕಿರುವ ಸದಸ್ಯ ಪ್ರತಿನಿಧಿಗಳು. | ಎಂಟು |
| 2 | ಮುಂಡಗೋಡ ಹಾಗೂ ಯಲ್ಲಾಪುರ ಶಾಖಾ ಮತದಾರ ಕ್ಷೇತ್ರದ ಸದಸ್ಯ ಮತದಾರರು ತಮ್ಮ ತಮ್ಮೊಳಗಿನಿಂದ ಚುನಾಯಿಸಬೇಕಿರುವ ಸದಸ್ಯ ಪ್ರತಿನಿಧಿ. | ಒಂದು |
| 3 | ಬೆಂಗಳೂರಿನ ಪಶ್ಚಿಮ ಕಾರ್ಡರಸ್ತೆ, ಬೆಂಗಳೂರಿನ ಅಲಸೂರು, ಹುಬ್ಬಳ್ಳಿ ಹಾಗೂ ದಾಂಡೇಲಿ ಶಾಖಾ ಮತದಾರಕ್ಷೇತ್ರದ ಸದಸ್ಯ ಮತದಾರರು ತಮ್ಮತಮ್ಮೊಳಗಿನಿಂದ ಚುನಾಯಿಸಬೇಕಿರುವ ಸದಸ್ಯ ಪ್ರತಿನಿಧಿ | ಒಂದು |
| 4 | ಕಾರವಾರ ಹಾಗೂ ಸದಾಶಿವಗಡ ಶಾಖಾ ಮತದಾರ ಕ್ಷೇತ್ರದ ಸದಸ್ಯ ಮತದಾರರು ತಮ್ಮತಮ್ಮೊಳಗಿನಿಂದ ಚುನಾಯಿಸಬೇಕಿರುವ ಸದಸ್ಯ ಪ್ರತಿನಿಧಿ. | ಒಂದು |
| 5 | ಬಬ್ರುವಾಡಾ ಹಾಗೂ ಕುಮಟಾ ಶಾಖಾ ಮತದಾರ ಕ್ಷೇತ್ರದ ಸದಸ್ಯ ಮತದಾರರು ತಮ್ಮತಮ್ಮೊಳಗಿನಿಂದ ಚುನಾಯಿಸಬೇಕಿರುವ ಸದಸ್ಯಪ್ರತಿನಿಧಿ. | ಒಂದು |
| 6 | ಹೊನ್ನಾವರ ಹಾಗೂ ಶಿರಾಲಿ ಶಾಖಾ ಮತದಾರ ಕ್ಷೇತ್ರದ ಸದಸ್ಯ ಮತದಾರರು ತಮ್ಮತಮ್ಮೊಳಗಿನಿಂದ ಚುನಾಯಿಸಬೇಕಿರುವ ಸದಸ್ಯ ಪ್ರತಿನಿಧಿ | ಒಂದು |
| 7 | ಕಾಯ್ದಿಟ್ಟ ಚುನಾಯಿಸತಕ್ಕ ಪ್ರತಿನಿಧಿಗಳು :- | |
| | (ಅ) ಬ್ಯಾಂಕಿನ ಎಲ್ಲಾ ಶಾಖಾ ಮತದಾರ ಕ್ಷೇತ್ರಗಳ ಸದಸ್ಯ ಮತದಾರರು ಸೇರಿ ಚುನಾಯಿಸತಕ್ಕ ಮಹಿಳಾ ಸದಸ್ಯ ಪ್ರತಿನಿಧಿ. | ಎರಡು |

| | | |
|---|---|---|
| | (ಬ) ಬ್ಯಾಂಕಿನ ಎಲ್ಲಾ ಶಾಖಾ ಮತದಾರ ಕ್ಷೇತ್ರಗಳ ಸದಸ್ಯ ಮತದಾರರು ಚುನಾಯಿಸತಕ್ಕ ಪರಿಶಿಷ್ಟ ಜಾತಿಯ ಸದಸ್ಯ ಪ್ರತಿನಿಧಿ. | ಒಂದು |
| | (ಕ) ಬ್ಯಾಂಕಿನ ಎಲ್ಲಾ ಶಾಖಾ ಮತದಾರ ಕ್ಷೇತ್ರಗಳ ಸದಸ್ಯ ಮತದಾರರು ಚುನಾಯಿಸತಕ್ಕ ಪರಿಶಿಷ್ಟ ವರ್ಗದ ಸದಸ್ಯ ಪ್ರತಿನಿಧಿ. | ಒಂದು |
| | (ಡ) ಬ್ಯಾಂಕಿನ ಎಲ್ಲಾ ಶಾಖಾ ಮತದಾರ ಕ್ಷೇತ್ರಗಳ ಸದಸ್ಯ ಮತದಾರರು ಸೇರಿ ಚುನಾಯಿಸತಕ್ಕ ಹಿಂದುಳಿದ ವರ್ಗಗಳ ಸದಸ್ಯ ಪ್ರತಿನಿಧಿಗಳು. | ಎರಡು |
| | ಅಂತೂ | ಹತ್ತೊಂಬತ್ತು |

## ಚುನಾವಣಾ ವೇಳಾಪಟ್ಟಿ

| ಕ್ರಸಂ | ನಿಯಮಗಳ ಸಂಖ್ಯೆ | ವಿವರ | ಸ್ಥಳ | ವೇಳೆ | ದಿನಾಂಕ |
|---|---|---|---|---|---|
| (ಎ) | 14ಎ | ನಾಮ ಪತ್ರವನ್ನು ಸ್ವೀಕರಿಸುವ ಕೊನೆಯ ದಿನಾಂಕ | ಬ್ಯಾಂಕಿನ ಕೇಂದ್ರ ಕಛೇರಿಯ ಮೊದಲನೇ ಮಹಡಿ | ಬೆಳಿಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 03.00 ಗಂಟೆ ವರೆಗೆ | 06-01-2024 |
| (ಬಿ) | 14ಬಿ | ನಾಮ ಪತ್ರಗಳ ಪರಿಶೀಲನೆ | -"- | ಬೆಳಿಗ್ಗೆ 11.00 ಗಂಟೆಯಿಂದ | 07-01-2024 |
| (ಸಿ) | 14ಬಿ(4) | ಕ್ರಮಬದ್ಧವಾದ ಅಭ್ಯರ್ಥಿಗಳ ನಾಮಪತ್ರಗಳ ಪ್ರಕಟಣೆ | ಬ್ಯಾಂಕಿನ ಕೇಂದ್ರ ಕಛೇರಿಯ ಮೊದಲನೇ ಮಹಡಿ | ನಾಮಪತ್ರಗಳ ಪರಿಶೀಲನೆಯ ನಂತರ | 07-01-2024 |
| (ಡಿ) | 14ಸಿ | ನಾಮ ಪತ್ರವನ್ನು ವಾಪಸ್ ಪಡೆಯುವುದು | -"- | ಮಧ್ಯಾಹ್ನ 03.00 ಗಂಟೆ ವರೆಗೆ | 08-01-2024 |
| (ಇ) | 14ಡಿ | ಕ್ರಮಬದ್ಧ ಸ್ಪರ್ಧಾಳು ಉಮೇದುವಾರರ ಪಟ್ಟಿ ಪ್ರಕಟಣೆ | ಬ್ಯಾಂಕಿನ ಕೇಂದ್ರ ಕಛೇರಿಯ ನೋಟೀಸ್ ಬೋರ್ಡಿನ ಮೇಲೆ | ಮಧ್ಯಾಹ್ನ 03.30 ಗಂಟೆಗೆ | 08-01-2024 |
| (ಎಫ್) | 14ಇ ಮತ್ತು ಎಫ್ | ಅಗತ್ಯತೆ ಕಂಡುಬಂದರೆ ಅಭ್ಯರ್ಥಿಗಳಿಗೆ ಚಿನ್ಹೆಗಳನ್ನು ಹಂಚುವುದು ಮತ್ತು ಚಿನ್ಹೆಯೊಂದಿಗೆ ಕ್ರಮಬದ್ಧ ಸ್ಪರ್ಧಾಳು ಉಮೇದುವಾರರ ಪಟ್ಟಿ ಪ್ರಕಟಣೆ. | -"- | ಮಧ್ಯಾಹ್ನ 03.30 ಗಂಟೆಯ ನಂತರ | 08-01-2024 |
| (ಜಿ) | | ಮತದಾನ (ಅಗತ್ಯವಿದ್ದಲ್ಲಿ) | ಎಮ್. ಇ. ಎಸ್. ವಾಣಿಜ್ಯ ವಿದ್ಯಾಲಯ, ಕಾಲೇಜು ರಸ್ತೆ, ಶಿರಸಿ | ಬೆಳಿಗ್ಗೆ 09.00 ಗಂಟೆಯಿಂದ ಸಾಯಂಕಾಲ 04.00 ಗಂಟೆ ವರೆಗೆ | 14-01-2024 |
| (ಎಚ್) | 14 ಎಕ್ಸ್ | ಮತಗಳ ಎಣಿಕೆ | ಎಮ್. ಇ. ಎಸ್. ವಾಣಿಜ್ಯ ವಿದ್ಯಾಲಯ, ಕಾಲೇಜು ರಸ್ತೆ, ಶಿರಸಿ | ಮತದಾನ ಮುಕ್ತಾಯವಾದ ಕೂಡಲೇ | 14-01-2024 |
| (ಐ) | 14 ವಾಯ್ | ಚುನಾವಣಾ ಫಲಿತಾಂಶ ಪ್ರಕಟಣೆ | ಬ್ಯಾಂಕಿನ ಕೇಂದ್ರ ಕಛೇರಿಯ ನೋಟೀಸ್ ಬೋರ್ಡಿನ ಮೇಲೆ | ಮತ ಎಣಿಕೆ ಮುಕ್ತಾಯವಾದ ಕೂಡಲೇ | 14-01-2024 |

ದಿನಾಂಕ : 30-12-2023

ಸ್ಥಳ : ಶಿರಸಿ

ಸಹಿ/-

(ಮಂಜುನಾಥ ಸಿಂಗ್)

ಸಹಕಾರ ಸಂಘಗಳ ಉಪನಿಬಂಧಕರು, ಉತ್ತರ ಕನ್ನಡ ಜಿಲ್ಲೆ ಕಾರವಾರ ಹಾಗೂ ರಿಟರ್ನಿಂಗ್ ಅಧಿಕಾರಿ, ದಿ ಶಿರಸಿ ಅರ್ಬನ್ ಸಹಕಾರಿ ಬ್ಯಾಂಕ, ಲಿಮಿಟೆಡ್, ಶಿರಸಿ

**ಸೂಚನೆ:**

(1) ಕಚೇರಿಯ ವೇಳೆಯು ಮುಂಜಾನೆ 10.30 ಗಂಟೆಯಿಂದ ಸಾಯಂಕಾಲ 5.30 ಗಂಟೆಯ ವರೆಗೆಇರುತ್ತದೆ.

(2) ಆಡಳಿತ ಮಂಡಲಿ ನಿರ್ದೇಶಕರ ಸ್ಥಾನಕ್ಕೆ ಸ್ಪರ್ಧಿಸಬಯಸುವವರು ನಾಮಪತ್ರವನ್ನು ರಿಟರ್ನಿಂಗ್ ಅಧಿಕಾರಿಗೆ ತಲುಪಿಸುವುದು.

(3) ನಾಮಪತ್ರದೊಂದಿಗೆ ಸಾಮಾನ್ಯ ಕ್ಷೇತ್ರದಿಂದ ಸ್ಪರ್ಧಿಸುವ ಉಮೇದುವಾರರು ರೂ.2,000-00 ಗಳ ಠೇವಣಿ ಮೊತ್ತವನ್ನು ಪಾವತಿಸಿ ಇದರ ರಶೀದಿಯನ್ನು ನಾಮಪತ್ರದೊಂದಿಗೆ ಲಗತ್ತಿಸತಕ್ಕದ್ದು.

(4) ಕಾಯ್ದಿರಿಸಿದ ಸ್ಥಾನಗಳಿಗೆ ಸ್ಪರ್ಧಿಸುವ ಅಭ್ಯರ್ಥಿಗಳು ಮೇಲಿನ ಠೇವಣಿ ಮೊತ್ತದ ಶೇಕಡಾ 50 ರಷ್ಟು ಅಂದರೆ ರೂ.1,000-00 ಬ್ಯಾಂಕಿಗೆ ಸಂದಾಯ ಮಾಡಿ ರಶೀದಿಯನ್ನು ನಾಮನಿರ್ದೇಶನ ಪತ್ರದೊಂದಿಗೆ ಲಗತ್ತಿಸತಕ್ಕದ್ದು.

(5) ಕಾಯ್ದಿರಿಸಿದ ಸ್ಥಾನಗಳಿಗೆ ಅಂದರೆ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ವರ್ಗಗಳ ಕ್ಷೇತ್ರಗಳಿಗೆ ಸ್ಪರ್ಧಿಸುವ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಪಡೆದ ಜಾತಿ ಪ್ರಮಾಣ ಪತ್ರಗಳ ಮೂಲ ಪ್ರತಿ ಲಗತ್ತಿಸತಕ್ಕದ್ದು.

(6) ನಾಮ ಪತ್ರವು ಒಬ್ಬ ಆಯಾಯ ಕ್ಷೇತ್ರದ ಅರ್ಹ ಮತದಾರರಿಂದ ಸೂಚಿಸಲ್ಪಟ್ಟಿರತಕ್ಕದ್ದು.

(7) ನಿಗದಿಪಡಿಸಿದ ಅವಧಿಯ ನಂತರ ಸಲ್ಲಿಸಿದ ನಾಮಪತ್ರಗಳನ್ನು ತಿರಸ್ಕರಿಸಲಾಗುವುದು.

(8) ಸಹಕಾರ ಸಂಘಗಳ ಕಾಯ್ದೆ ಕಲಂ 29ಸಿ ರನ್ವಯ ಅನರ್ಹರಾದವರು ನಿರ್ದೇಶಕರ ಸ್ಥಾನಕ್ಕೆ ಸ್ಪರ್ಧಿಸಲು ಅನರ್ಹರು.

(9) ಉಮೇದುವಾರರು ನಾಮಪತ್ರಗಳ ಪರಿಶೀಲನೆ ಕಾಲಕ್ಕೆ ಹಾಜರಿರಬಹುದು.

(10) ಬ್ಯಾಂಕಿನ ಅಧಿಕೃತ ಗುರುತಿನ ಚೀಟಿಯನ್ನು ಹೊಂದಿಲ್ಲದವರಿಗೆ ಮತದಾನ ಮಾಡಲು ಪ್ರವೇಶವಿರುವುದಿಲ್ಲ.